ಶ್ರೀ ಭಾಸ್ಕರ್‌ನಾಯ್ಕು—ಅಧ್ಯಕ್ಷರೇ, It is a very pertinent question.

ಶ್ರೀ ಮತ್ತಿಕಟ್ಟಿ.—ಅಧ್ಯಕ್ಷರೆ, ನನ್ನದೊಂದು ಚಿಕ್ಕ ಸಲಹೆ ಇದೆ, ಈ ರೀತಿ ಮಾಡಿದರೆ ಪ್ರಾಬ್ಲಮ್ ಸಾಲ್ವ್ ಆಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರೆಲ್ಲರೂ ದಯವಮಾಡಿ ಕುಳಿತುಕೊಳ್ಳಬೇಕು.

ಶ್ರೀ ಜಿ. ಬಿ. ಶಂಕರ್‌ರಾವ್.—ಅಧ್ಯಕ್ಷರೆ, ನಾನು ಈಗಾಗಲೇ ಒಂದು ಉಚಿತವಾದಂಥ ಭರವಸೆಯನ್ನು ಕೊಟ್ಟಿದ್ದೇನೆ.

MR. SPEAKER.—The Hon'ble Minister has categorically stated thnt action will be taken to see that regionwise interviews are called from next year onwards.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಅಧ್ಯಕ್ಷರೆ, ಇಪ್ಪತ್ತು ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಇದೆ.

ಶ್ರೀ ಜಿ. ಬಿ. ಶಂಕರರಾವ್.—ಅಧ್ಯಕ್ಷರೆ, ಈಗ ನಾನು ಎದ್ದು ನಿಂತಿದ್ದೇನೆ.....ಈಗ ಒಂದು ಸಲಹೆ ಬರುತ್ತಿದೆ. ಈ ವರ್ಷವೇ, ವಿಭಾಗ ಮಟ್ಟದ ವಿದ್ಯಾರ್ಥಿಗಳನ್ನು, ಆ ವಿಭಾಗ ಮಂಟ್ಪಕೆ ಹೋಗಿ, ಈ ಜಿಲ್ಲಾಮಟ್ಟದ ಆಯ್ಕೆ ಸಮಿತಿಯವರು ಆಯ್ಕೆ ಮಾಡಬೇಕೆಂದು ಹೇಳುತ್ತಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಸಾಧ್ಯ ಆದರೆ, ಈ ವರ್ಷದಿಂದ ಅವರು ವಿಭಾಗ ಮಂಟ್ಪದಲ್ಲಿ ಹೋಗಿ ಸಂದರ್ಶನ ಮಾಡಲಿಕ್ಕೆ ಮಾಡುತ್ತೇನೆ.

SRI K. BHASKAR NAIDU.—Sir, the Minister was saying that he would make arrangements for calling for interviews from next year onwards. I would like to know what about the fate of the students of this year. Why not the Government have the divisionwise interviews this year itself. I would like the Hon'ble Chief Minister to interfence in this matter.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಮಾಡಿ ಕುಳಿತುಕೊಳ್ಳಬೇಕು. ಈ ವರ್ಷದಲ್ಲಿಯೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಸ್. ಎಸ್. ಆರಕೇರಿ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸಾಧ್ಯ ಆದರೆ ಅಂತ ಸೇರಿಸಿದ್ದಾರೆ.

MR. SPEAKER.—The Hon'ble Minister has said that he would examine this issue. So, give him some time. Now let us go to the next item. Now I call Sri. Raju Gowda to raise the matter under Rule 312.

IV. MATTER UNDER RULE 312

re.—Death of Sri. Nanjaiah of Mangala village.

SRI G. RAJU GOWDA.—Sir, I raise the matter regarding the death of Sri. Nanjaiah of Mangala village due to shooting by forest officials of Muchu Bhavi forest division.

SRI G. MADE GOWDA (Minister for Forests Mines and Geology).—Sir, I wish to make the following statement.

On 8th July 1981 at night, the Range Forest Officer, Rampura Range recived information that some smugglers were trying to smuggle sandalwood from the reserve forests of Madeswaramalai from the locality near Mutchbavi. The Range Forest Officer, Ramapura and the Range Forst Officer, Madeswara Malai with their staff proceeded in a Government jeep immediately and kept a watch near Mutchubavi along the Changadi road through which smugglers were to pass as per information received. At about 2 A M. on 9th July 1981, a car bearing No. MEQ 1324 came along this road. The car did not stop at the behest of the officials inspite of the road block. The forest officials then tried to compel the car to stop and one of the Guards by name Sri Shanmughan fired at theback side of the car. The car stopped at a little distance and the staff surrounded it and found four occupants namely (1) Basha (2) Abdul Rahman (3) Syed Ismail and (4) Nanja, inside the car along with approximately half-a-tonne of sandalwood billets. It was also found that Sri Nanja had sustained injuries due to gun shot. Similarly the forester by name Sri Shivanna who was in the party was also injured. The wounded were immediately taken to the nearest hospital at Rampura and given first-aid treatment. A complaint with the Rampura Police was filed by the Range Forest Officer, Kowdalli on 9th July 1981 at 7.00 hours. On this complaint, a case in Ramapura Police Station under C.R. No. 68/81 under Sections 379-411 IPC read with Sec. 86-87 Karnataka Forest Act has been registered and taken up for investigation. A case under Section 304-A IPC has also been registered. The three accused brought by the staff were handed over to the Police. On the advise of the Medical Attendant at Ramapura, the wounded were removed to Kollegal Government Hospital, were Sri Nanja who was injured died. The Forester by name Sri Shivanna whose left hand fingers were injured had his two fingers amputated.

ಶ್ರೀ ರಾಜುಗೌಡ. — ಸ್ವಾಮಿ, ನಡೆದಿರತಕ್ಕಂಥಾದ್ದನ್ನು ಆಮೂಲಾಗ್ರವಾಗಿ ಪರಿಶೀಲಿಸಿದಾಗ ಇದನ್ನು ಭಯಂಕರ ದುರ್ಘಟನೆ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ಅರಣ್ಯ ಅಧಿಕಾರಿಗಳು ಅಕ್ಷಮ್ಯ ಅಪರಾಧ ಎಸಗಿದ್ದಾರೆ. ಸರ್ಕಾರ ಕಳ್ಳಸಾಗಣೆಗಾರರನ್ನು ಗುಂಡಿಕ್ಕಿ ಕೊಲ್ಲುತಕ್ಕ ನಿರ್ದೇಶನವನ್ನು ಯಾವ ಸಂದರ್ಭದಲ್ಲೂ ಕೊಟ್ಟಿಲ್ಲ. ಸುಮಾರು ೧೫ ಜನ ಅರಣ್ಯಾಧಿಕಾರಿಗಳು ಕೇವಲ ನಾಲ್ಕು ಜನ ಕಳ್ಳಸಾಗಣೆದಾರರನ್ನು ಕೈಸೆರೆ ಹಿಡಿಯಲಿಕ್ಕೆ ಸಾಧ್ಯವಾಗಲಿಲ್ಲವೇ? ಕಳ್ಳಸಾಗಣೆದಾರರ ಕಾರನ್ನು ನಿಲ್ಲಿಸಲು ಬೇರೆ ತಂತ್ರವನ್ನು ಉಪಯೋಗಿಸಿ, ಒಂದು ವೇಳೆ ಅದು ನೆರವೇರದೆ ಇದ್ದಾಗ ಗುಂಡಲ್ಲಿ ಹೊಡೆಯಬಹುದಾಗಿತ್ತು. ಈಗ ಏನಾಗಿದೆ ಎಂದರೆ ಅವರು ಕಾರು ನಿಲ್ಲಿಸಲಿಕ್ಕೆ ಪ್ರಯತ್ನಪಟ್ಟರು ಕಳ್ಳಸಾಗಾಣೆದಾರರು ನಿಲ್ಲಿಸಲಿಲ್ಲ. ಮತ್ತೆ ಹಿಂದುಗಡೆಯಿಂದ ತಮ್ಮ ವಾಹನದಿಂದ ಹೋಗಿ ಗುಂಡು ಹಾಕಿದರು, ಆಗ ಕಾರು ನಿಂತು ಹೋಯಿತು ಎಂದು ಹೇಳುತ್ತೀರಿ. ಕಾರಿಗೆ ಗುಂಡು ಹೊಡೆದ ಮೇಲೆ, ಆ ಗುಂಡಿನ ಏಟಿನಿಂದ ಟೈರ್ ಪಂಚರ್ ಆಗಿ ನಿಂತುಕೊಂಡ ಮೇಲೆ ನಂಜಯ್ಯ ಹೇಗೆ ಸಾಯಲಿಕ್ಕೆ ಸಾಧ್ಯವಾಗಂತ್ತದೆ. ಬಹುಶಃ ಗುಂಡು ಕಾರಿನ ಹಿಂದುಗಡೆಯಿಂದ ಗಾಜನ್ನು ತೂತು ಮಾಡಿಕೊಂಡು ಹೋಗಿದೆ ಎನ್ನುವುದು ತಮ್ಮ ಹೇಳಿಕೆಯಲ್ಲಿ ಇಲ್ಲ. ಇದರಿಂದ ನಮಗೆ ಏನು ಅನಿಸುತ್ತದೆ, ಇನ್ನೊಬ್ಬ

ಶಿವಣ್ಣ ಎನ್ನತಕ್ಕವನು ಎಡಗೈ ಹೆಬ್ಬೆಟ್ಟನ್ನು ಕೆಳೆದುಕೊಂಡಿದ್ದಾರೆ ಎಂದು ತಾವು ಹೇಳಿದರೆ ಏನು ಅರ್ಥ ಮಾಡಿಕೊಳ್ಳಬೇಕು. ಕಾರನ್ನು ಬೇಕಾದರೆ ಹೊಡೆದು ನಿಲ್ಲಿಸಲಿ. ಮತ್ತೆ ಎರಡನೆಯ ಸಾರಿ ಒಂದು ಗುಂಡು ಹಾರಿಸಿದ್ದಾರೆ ಆ ನಂಜನ ಮೇಲೆ, ಆವಾಗ ಫಾರೆಸ್ಟರ್ ಶಿವಣ್ಣ ತಡೆದಿದ್ದಾನೆ. ಅವನು ತಡೆದಾಗ ಅವನ ಕೈಗೆ ತಗುಲಿದೆ, ಅವನ ಬೆಟ್ಟು ಹೋಗಿದೆ. ನಂಜ ಎಂಬುವವನು ಮೃತಪಟ್ಟಿದ್ದಾನೆ.

ಅಧ್ಯಕ್ಷರು.— ಕೇಸು ಬುಕ್ ಆಗಿದೆ. Do not discuss all these things here. If you want to discuss here, you go to his chambers. ಇದು ಮುಖ್ಯವಾಗಿರಬಹುದು. ಇದನ್ನು ಕೋರ್ಟಿನಲ್ಲಿ ತೀರ್ಮಾನ ಮಾಡುತ್ತಾರೆ. ಆದರೆ ಈಗ ತಾವು ಮಂತ್ರಿಗಳಿಂದ ಏನಾದರೂ ಕೇಳಿವುದಿದ್ದರೆ ಒಂದೆರಡು ಮಾತುಗಳಲ್ಲಿ ಕೇಳಬಹುದು ಅಷ್ಟೆ.

ಶ್ರೀ ಆರ್. ರಾಜೂಗೌಡ.— ಸ್ವಾಮಿ, ನನ್ನ ಪಾಯಿಂಟ್ ಒಂದೇ ಒಂದು, ಆರಣ್ಯಾಧಿಕಾರಿಗಳು ಅನಾದರಣೆಯಿಂದ, ಅಲಕ್ಷ್ಯದಿಂದ, ಬೇಜವಾಬ್ದಾರಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆಂಬುದು ನಿರ್ವಿವಾದವಾದುದು. ಯಾವ ಒಬ್ಬ ಅಧಿಕಾರಿ ಯಾವ ಸಂದರ್ಭದಲ್ಲಿ ಗುಂಡು ಹಾರಿಸಬೇಕೆಂದು.....

ಅಧ್ಯಕ್ಷರು.— ತಾವು ವಕೀಲರೆ? ದಯವಿಟ್ಟು ನನ್ನ ಪೂತನ್ನು ಕೇಳಿ. ಇಂಳಿನೇ ಸೆಕ್ಷನ್ ಪ್ರಕಾರ.....

ಶ್ರೀ ಆರ್. ರಾಜೂಗೌಡ.— ಸ್ವಾಮಿ, ನಾನು ಹೇಳುತ್ತಿರುವುದು.....

ಅಧ್ಯಕ್ಷರು.— ನಾನು ಹೇಳುವುದನ್ನು ತಾವು ಕೇಳಿ,please here me. ಕೇಸು ರಿಜಿಸ್ಟರ್ ಆಗಿದೆ, ಅದು ಕೋರ್ಟಿನಲ್ಲಿ ವಿಚಾರಣೆಯಾಗತ್ತದೆ. ಅಲ್ಲಿ ವಕೀಲರು ಮಾಡುವ ವಾದವನ್ನು ತಾವು ಇಲ್ಲಿ ಏತಕ್ಕೆ ಮಾಡುತ್ತಿದ್ದೀರಿ. ನಿಮ್ಮ ಗಮನಕ್ಕೆ ಏನಾದರೂ ಬಂದಿದ್ದಿರೆ, ಅಧಿಕಾರಿಗಳಿಂದ ಅಥವಾ ಡಿಪಾರ್ಟ್‌ಮೆಂಟ್‌ನಿಂದ ತಿಳಿದುಕೊಳ್ಳುವದು ಅವಶ್ಯಕ ಇದ್ದರೆ ತಿಳಿದುಕೊಳ್ಳಿ.

ಶ್ರೀ ಆರ್. ರಾಜೂಗೌಡ.— ಸೂನ್ಯ ಅಧ್ಯಕ್ಷರೇ, ಎರಡು ವಿಷಯದ ಬಗ್ಗೆ ಮಾತ್ರ ಮಾನ್ಯ ಸಚಿವರ ಸಮಜಾಯಿಷಿಯನ್ನು ಕೇಳುವುದಕ್ಕೆ ಇಚ್ಚೆಪಡುತ್ತೇನೆ. ನನಗೆ ತಿಳಿದ ಮಟ್ಟಿಗೆ ರೇಂಜ್ ಫಾರೆಸ್ಟ್ ಅಧಿಕಾರಿಯಂದ ಕೆಳಗೆ ಇರತಕ್ಕ ಅಧಿಕಾರಿ ಯಾವುದೇ ಸಂದರ್ಭದಲ್ಲೂ ಬಂದೂಕವನ್ನು ಉಪಯೋಗಿಸಬಾರದೆಂದು ಏಟ್ಲಿ ಇದೆ. ಈ ಸಂದರ್ಭದಲ್ಲಿ ಯಾರೋ ಒಬ್ಬ ಗಾರ್ಡ್ ಬಂದೂಕ ಉಪಯೋಗಿಸುವ ಬಗ್ಗೆ ತರಬೇತಿ ಇಲ್ಲದಿರುವವನು ಬಂದೂಕನ್ನು ಉಪಯೋಗಿಸಿದ್ದಾರೆ. ಅದು ತಪ್ಪು ಎಂದು ಹೇಳಬಯಸುತ್ತೇನೆ. ಆಕಸ್ಮಿಕವಾಗಿ ದುರ್ಮರಣಕ್ಕೆ ಈಡಾದವರ ಕುಟುಂಬದವರಿಗೆ ಯಾವರೀತಿ ಪರಿಹಾರವನ್ನು ಸರ್ಕಾರ ಕೊಡುತ್ತದೋ ಆದೇ ರೀತಿ ಇದನ್ನೂ ಪರಿಗಣಿಸಿ ಮೃತನ ಕುಟುಂಬದವರಿಗೆ ಮಾನ್ಯ ಮಂಳ್ಳಿ ಮುಂತ್ರಿಯವರು ಕನಿಷ್ಠಪಕ್ಷ ೫ ಸಾವಿರ ರೂಪಾಯಿಗಳನ್ನಾದರೂ ಕೊಡುವುದಾಗಿ ಘೋಷಿಸಬೇಕೆಂದು ಹೇಳುವುದರ ಜೊತೆಗೆ ತಪ್ಪು ಮಾಡಿರತಕ್ಕ ವ್ಯಕ್ತಿಯನ್ನು ಬರ್ತಫ್ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಳಬಯಸುತ್ತೇನೆ.

ಶ್ರೀ ಎಂ. ಮಾದೇಗೌಡ — ಈ ಮನೆಯ ಅನೇಕ ಜನ ಸದಸ್ಯರು ಮಾತನಾಡುತ್ತಾ ಅರಣ್ಯದ ನಾಶ ಪ್ರತಿದಿವಸ ಆಗುತ್ತಿದೆ, ಇದರ ಬಗ್ಗೆ ಸೂಕ್ತವಾದ, ತೀಪ್ರವಾದ, ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಈ ಸದನದಲ್ಲೂ ಹೇಳಿದ್ದಾರೆ. ಮತ್ತು ಸದನದಿಂದ ಹೊರಗಡೆಯೂ ಹೇಳಿದ್ದಾರೆ. ಈಗ ನಾವು ಉಗ್ರವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಆದರೆ ಇದು ಉದ್ದೇಶ ಪೂರಿತವಾಗಿ ತೆಗೆದುಕೊಂಡಿರುವುದಲ್ಲ. ಅಥವಾ ದುರುದ್ದೇಶದಿಂದ ಇದು ಕೂಡಿಲ್ಲ, ನಾವು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು, ಹಾಗೆ ತೆಗದುಕೊಳ್ಳುವಾಗ ಅಚಾತುರ್ಯವಾಗಿದೆ. ಆದಕ್ಕಾಗಿ ನಾವು ಪಶ್ಚಾತ್ತಾಪ ಪಡುತ್ತೇವೆ. ಈ ವಿಚಾರದಲ್ಲಿ ಇನ್‌ವೆಸ್ಟಿಗೇಷನ್ ಕೂಡ ನಡೆಯುತ್ತಿದೆ.

ಅಧ್ಯಕ್ಷರು.— ಕಾರಿಗೆ ಹಿಂದಿನಿಂದ ಹೊಡೆದಿದ್ದಾರೆಂದು ನಿಮ್ಮ ಸ್ಟೇಟ್‌ಮೆಂಟ್‌ನಲ್ಲದೆ...

ಶ್ರೀ ಎಂ. ಮಾದೇಗೌಡ.— ಯಾವ ದುರುದ್ದೇಶವೂ ಇರಲಿಲ್ಲ. ಅವರು ಯಾರು ಎಂಬೂದೂ ಗೊತ್ತಿಲ್ಲ. ಕಳ್ಳತನ ನಡೆದದ್ದು ನಿಜ, ಸ್ಯಾಂಡಲ್ ವುಡ್ ತೆಗೆದುಕೊಂಡು ಹೋಗುತ್ತಿದ್ದುದೂ ನಿಜ.

ಪೋಲೀಸರು ಹೊಡೆದಿರುವುದೂ ನಿಜ. ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ರಾಜೂಗೌಡರು ಮೃತನಾಡಿ ಮೃತರ ಕುಟುಂಬದವರಿಗೆ ಪರಿಹಾರವನ್ನು ಕೊಡಬೇಕೆಂದು ಹೇಳಿದ್ದಾರೆ, ಅವರಿಗೆ ನಾನಾದರೂ ಹೇಳುವುದಿಷ್ಟೆ. ಇಂಥ ದುಷ್ಕೃತ್ಯಗಳನ್ನು ಮಾಡಿದವರಿಗೆ ಪರಿಹಾರವನ್ನು ಕೊಡುವುದಕ್ಕೆ ನಮ್ಮ ರಾಜ್ಯದ ಕಾನೂನಿನಲ್ಲಿ ಅವಕಾಶ ವಿಲ್ಲ.

ಶ್ರೀ ಆರ್. ರಾಜೂಗೌಡ.— ಕಾರಿಗೆ ಹಿಂದಿನಿಂದ ಟೈರ್‌ಗೆ ಹೊಡೆದಾಗ ಅವರಿಗೆ ಏಟು ಹೇಗೆ ತಗುಲಿತು ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ತಾವು ಮಾನವೀಯತೆಯಿಂದ ಇದನ್ನು ಪರಿಶೀಲಿಸಿ ಸತ್ತವರ ಕುಟುಂಬದವರಿಗೆ ಪರಿಹಾರವನ್ನು ಕೊಡಿ. ಅವರು ಬಹಳ ಕಷ್ಟದಲ್ಲಿದ್ದಾರೆ, ಮಕ್ಕಳು ಬೀದಿ ಪಾಲಾಗಿವೆ.

MOTION FOR ELECTION

SRI R. GUNDU RAO.— Sir, I Beg to move;

"That this Assembly do proceed to elect THREE Members to the Board of Regents of the University of Agricultural Sciences according to the principle of proportional representation by means of signal transferable votes as required under sub-section (2) (b) (iv) of section 25 of the University of Agricultural Sciences Act, 1963."

The question was proposed.

MR. SPEAKER.— Now I will put the motion to vote. The question is :

"That this Assembly do produced to elect THREE members to the Board of Regents of the University of Agricultural Sciences according to the principals of proportional representation by mean of signle transferable vote as required under sub-section (2) (b) (iv) of section 25 of the University of Agricultural Sciences Act, 1963."

The motion was adopted

MR. SPEAKER.— The calenders of evnts will be circulated separately.

FINANCIAL BUSINESS

Discussion on the Voting of demands for Grants for 1981-82

† ಶ್ರೀ ಹೆಚ್. ಡಿ ದೇವೇಗೌಡರು (ಹೊಳೇನರಸೀಪುರ),— ಮಾನ್ಯ ಸಭಾಧ್ಯಕ್ಷರೆ, ಈ ಸಭೆಯ ಮುಂದೆ ಈಗಾಗಲೇ ಕಳೆದ ೨ ದಿವಸದಿಂದ ನೀರಾವರಿ ಬಗ್ಗೆ, ಲೋಕೋಪಯೋಗಿ ಇಲಾಖೆ ಬಗ್ಗೆ, ಹಾಗೂ ಬಂದರು ಕಟ್ಟಡಗಳ ನಿರ್ಮಾಣದ ಬಗ್ಗೆ ಬಹಳ ಪ್ರಮುಖವಾದ ರೀತಿಯಲ್ಲಿ ಚರ್ಚೆಯಾಗಿದೆ. ಈ ದಿವಸ ಮತ್ತೆ ಈ ಚರ್ಚೆಯನ್ನು ಮುಂದುವರೆಸಬೇಕೆಂದು ನಿನ್ನೆಯ ದಿವಸ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಾಗ ಇವತ್ತು ಇದರ ಬಗ್ಗೆ ಚರ್ಚೆ ಮಾಡಲು ಸ್ವಲ್ಪಕಾಲ ಅವಕಾಶವನ್ನು ಕೊಡಲು ದಾವು ಒಪ್ಪಿದ್ದಕ್ಕೆ ಮೊದಲನೆಯದಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.